ಎಸ್.ಎನ್. ಮಹಾಬಲರಾವ್, ಎನ್ನಾರ್ಪುರ

ಬೀಜ ನೆಟ್ಟ ಕೂಡಲೆ ಹಣ್ಣು ಬೇಕೆಂದರೆ?



ಕೊಡಬೇಕಿತ್ತು. ಪರಂಗಿಯ ಬೀಜವನ್ನು ನೆಟ್ಟು ಬರುವಷ್ಟರಲ್ಲೇ ನೀವು ಹಣ್ಣು ತಿಂದುಬಿಡಬಾರದಿತ್ತು.

ಜಿ. ಸುಬ್ರಹ್ಮಣ್ಯ, ಬೆಂಗಳೂರು

'ಪತಿವ್ರತೆ' ಎಂಬ ಸ್ತ್ರೀಲಿಂಗ ಶಬ್ದದ ಪುಲ್ಲಿಂಗ ಪದ ಹೇಳಬಲ್ಲಿರಾ?

ಶ್ರೀರಾಮಚಂದ್ರ.

ರಮೇಶ ಬೊಂಗಾಳೆ, ಬೈಲಹೊಂಗಲ

ನಿಜವಾದ ಬಂಧುಗಳು ಯಾರು?

ಯಾವುದೇ ಸಮಯದಲ್ಲೂ ಫೋನ್ ರಿಸೀವ್ ಮಾಡುವವರು.

ಬಾ.ರಂ. ಸುರೇಶ್, ಶಿವಮೊಗ್ಗ

ಸ್ವರ್ಗಕ್ಕೆ ಎಷ್ಟು ಮೆಟ್ಟಿಲು ಎಂದು ಕೂಡಲೆ ಹೇಳಲಿಕ್ಕಾಗುತ್ತಾ?

ನರಕದಿಂದ ನ್ಯಾಯ, ನೀತಿ, ಧರ್ಮದ ಮೂರೇ ಮೆಟ್ಟಿಲು ಹತ್ತಿದರೆ ಸ್ವರ್ಗ.

ಅಮರಯ್ಯಾ ಪತ್ರಿಮಠ, ಸುರಪುರ

ಅಂಗಳಕ್ಕೆ ರಂಗೋಲಿ ಚೆಂದ. ಅಂಗನೆಗೆ?



ರಂಗು ರಂಗಿನ ಓಕುಳಿ ಚೆಂದ.

ಬಿ. ಚಂದ್ರೇಗೌಡ, ಬೆಂಗಳೂರು

'ವಿಚ್ಛೇದನ' ಪದದ ವ್ಯುತ್ಪತ್ತಿ ಹೇಗೆ ಉಂಟಾಯಿತು?

'ವಿತ್ತ ಛೇದನ' – ಲಾಯರ್‌ಗೆ ಅಷ್ಟು ಕೊಟ್ಟು, ಹೆಂಡ್ತೀಗಷ್ಟು ಕೊಟ್ಟು, ಮಕ್ಕಳಿಗಷ್ಟು ಕೊಟ್ಟು ಹೊರಡು ಆಚೆ ಗಂಡ, ಹುಚ್ಚುಂಡೆಗಂಡ!

ಪಿ.ಎನ್. ಶ್ರೀವತ್ಸ, ಬೆಂಗಳೂರು

ಈ ವಿಭಾಗದಲ್ಲಿ ಪ್ರಶ್ನೆ ಕೇಳುವವರು ಸಾಮಾನ್ಯವಾಗಿ ವಾರವಾರವೂ ಅವರೇ ಆಗಿರಲು ಕಾರಣ?

ಇತರರ ಪ್ರಶ್ನಾಕೌಶಲದ ಅಭಾವ; ಇವರ ಅಮಿತವಾದ ಪ್ರಶ್ನೋತ್ಸಾಹ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

'ಸುಧಾ' ಹುಟ್ಟುಹಬ್ಬ ಎಂದು? ಅದರ ಆಚರಣೆ ಹೇಗೆ?

ಪ್ರತಿ ಗುರುವಾರ; ಓದಿ ಹರಡುವುದರ ಮೂಲಕ.

ಅಭಿಷೇಕ ಬೊಂಗಾಳೆ, ಬೈಲಹೊಂಗಲ

ಆಗಿನ ಗ್ರಂಥಾಲಯಕ್ಕೂ ಈಗಿನ ಗ್ರಂಥಾಲಯಕ್ಕೂ ಏನು ವ್ಯತ್ಯಾಸ ರಾಮ್?

ಆಗಿನದು ವಾಕ್ಯಗಳ ಅರ್ಥ ಮುಖ್ಯವಾಗಿತ್ತು. ಈಗ ಪುಸ್ತಕಗಳಿಂದ ಗಳಿಸುವ ಅರ್ಥ ಮುಖ್ಯವಾಗಿದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಹೆಣ್ಣಿನ ಗರ್ಭಕೋಶಕ್ಕೂ, ದೇವರ ಗರ್ಭಗುಡಿಗೂ ಏನು ವ್ಯತ್ಯಾಸ?

ಗರ್ಭಗುಡಿ ಸೃಷ್ಟಿಕರ್ತನ ಹೆಡ್ ಆಫೀಸ್; ಗರ್ಭಕೋಶ ಪ್ರೊಡಕ್ಷನ್ ಯುನಿಟ್.

ರಾಜಶೇಖರ ಹಾದಿಮನಿ, ಧಾರವಾಡ

ಬಿಡಾಡಿ ನಾಯಿಗಳನ್ನು ಕರೆದು ಅನ್ನವಿಕ್ಕಿ ನಂತರ ಕಲ್ಲು ಹೊಡೆಯುವವರು ಮನುಷ್ಯರೇ?

ಮತ ಹಾಕಿದವರಿಗೆ ವಿಷ ಉಣಿಸುವರಿಲ್ಲವೇ! ಯಥಾ ಮಂತ್ರಿ ತಥಾ ಕಂತ್ರಿ.

ಪಿ. ಶಂಕರಪ್ಪ, ಶಿವಮೊಗ್ಗ

ಅನ್ಯರ ಪ್ರಾಬ್ಲಂ ಸುಲಭವಾಗಿ ಬಗೆಹರಿಸುವಾಗ ಸ್ವಂತ ಪ್ರಾಬ್ಲಂ ಕಷ್ಟವಾಗಿದೆಯಲ್ಲಾ...?

ಅನ್ಯರಿಗೆ ನಿಮ್ಮ ಪ್ರಾಬ್ಲಂ ಅನ್ಯರ ಪ್ರಾಬ್ಲಂ ಆದ್ದರಿಂದ ಅನ್ಯರಿಂದಲೇ ಬಗೆಹರಿಸಿಕೊಳ್ಳಿ.

ಆ.ನಾ.ನ. ಮೂರ್ತಿ, ಬೆಂಗಳೂರು

ಈಗಿನ ರಾಜಕಾರಣಿಗಳ ರೂಪಾಂತರಕ್ಕೂ, ಕೊರೊನಾ ವೈರಸ್ಸಿನ ರೂಪಾಂತರಕ್ಕೂ ವ್ಯತ್ಯಾಸವೇನು?

ರೂಪಾಂತರಿ ರಾಜಕಾರಣಿಗೆ ಲಸಿಕೆ ಲಭ್ಯವಿಲ್ಲ.

ಬಿ.ಆರ್. ಉಷಾ, ಬೆಂಗಳೂರು

ಆರೋಗ್ಯವೇ ಭಾಗ್ಯ. ಅನಾರೋಗ್ಯವೇ...?

ಸ್ಕ್ಯಾನಿಂಗ್, ಲ್ಯಾಬ್, ಕ್ಲಿನಿಕ್‌ಗಳ ಭಾಗ್ಯ.

## ವಾರದ ಪ್ರಶ್ನೆ

ಎನ್. ವೈದೇಹಿ, ಮೈಸೂರು

ಸಕಲ ಸವಲತ್ತುಗಳು ಸಿಕ್ಕಮೇಲೂ ಜೀವನದಲ್ಲಿ ಹಳೆಯ ನೆನಪುಗಳು ಕಾಡುವುದೇಕೆ?

ಬುಡದಲ್ಲಿ ನಿಂತ ಬಗ್ಗಡ ನೀರನ್ನು ಕಲಕಿದಾಗ ಮೇಲಕ್ಕೆ ಬರುವುದು ಸಹಜ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಮುಳ್ಳು ಚುಚ್ಚಿದರೆ ತೆಗೆಯಬಹುದು. ಮಾತು ಚುಚ್ಚಿದರೆ ಹೇಗೆ ತೆಗೆಯುವುದು?

ವಿವೇಕದ ಮುಲಾಮು ಹಚ್ಚಿದರೆ ಮಾತು ಮಥನದಲ್ಲಿ ಕರಗಿಹೋಗುತ್ತದೆ.

ಅಶೋಕ್ ಹಾಲಣ್ಣವರ, ಲಕ್ಷ್ಮೇಶ್ವರ

ನಿಸರ್ಗಕ್ಕೂ ಸ್ವರ್ಗಕ್ಕೂ ಏನು ವ್ಯತ್ಯಾಸ ಗುರೂಜೀ?

ಸ್ವರ್ಗಕ್ಕೆ ಶರೀರಸಮೇತ ಮನುಷ್ಯ ಹೋಗುವುದಿಲ್ಲವಾದ್ದರಿಂದ ಮಾಲಿನ್ಯ ಆಗದು.

ಮೋಹನರಾಜು ಎಸ್.ಎ. ಶಂಕರಘಟ್ಟ

ಕುದುರೆ ಕಂಡ್ರೆ ಕಾಲು ನೋವು. ಸುಂದರಿ ಕಂಡ್ರೆ?



ಹಾರ್ಟ್ ಟ್ರಬಲ್ಲು.

ಎಸ್.ಸಿ. ರಮೇಶ್, ಮೈಸೂರು

ವ್ಯಕ್ತಿ ಸತ್ತಾಗ ಅವನ ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿ ಪಟಾಕಿ ಸಿಡಿಸುವುದು ಖುಷಿಗೋ, ದುಃಖಕ್ಕೋ?

ಹೆಂಡ, ಹಣ, ಹೇಗೆ ಹಾಡಿದರೂ ಕೇಳುವ ಶ್ರೋತೃಗಳು ಸಿಕ್ಕಾಗ ಖುಷಿಯೇ.

ನರಸಿಂಹ ಪೈ, ಕಾಸರಕೋಡ

ಭಾರತದಲ್ಲಿ ಮೀಸಲಾತಿ ಎಷ್ಟು ತಲೆಮಾರುಗಳ ತನಕ?

ರಾಜಕಾರಣಿಗಳು ಅದಿಲ್ಲದೆಯೂ ಗೆಲ್ಲುವ ತಾಕತ್ತು ಬೆಳೆಸಿಕೊಳ್ಳುವ ತನಕ.

■ ರಾಮ್

ಪ್ರಶ್ನೆ ಕಳಿಸಲು: editorsu@sudha.co.in